**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 01 ಇಜಿಯು 2018

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು
ದಿನಾಂಕ: 02-05-2018

ಇವರಿಗೆ,

ಪ್ರಾಚಾರ್ಯರು
ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು / ಇಂಜನಿಯರಿಂಗ್ ಕಾಲೇಜುಗಳು.
ಜೆಟಿಎಸ್ ಸಂಸ್ಥೆಗಳಿಗೆ.

**ನೆನಪೋಲೆ**

**ವಿಷಯ:-** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಕೆಲವು ಅಧಿಕಾರಿ/ಸಿಬ್ಬಂದಿ ವರ್ಗದವರ ಖಾಯಂ ಪೂರ್ವ ಅವಧಿ ಮತ್ತು ಕಾಲಮಿತಿ ವೇತನ ಬಡ್ತಿಗಳು ಬಾಕಿ ಇರುವ ಬಗ್ಗೆ.

ಉಲ್ಲೇಖ:- ನಿರ್ದೇಶನಾಲಯದ ಪತ್ರ ಸಂಖ್ಯೆ ಡಿಟಿಇ 01 ಇಜಿಯು 2017 ದಿನಾಂಕ 02/03/2018.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿ ತಿಳಿಸಿರುವಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಹೆಚ್‌ಆರ್‌ಎಂಎಸ್ ನೋಡಲ್ ಆಫಿಸರ್ ಲಾಗ್‌ಇನ್ ನಲ್ಲಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಅಧಿಕಾರಿ/ಸಿಬ್ಬಂದಿ ವರ್ಗದವರ ಖಾಯಂ ಪೂರ್ವ ಅವಧಿ ಮತ್ತು ಕಾಲಮಿತಿ ವೇತನ ಬಡ್ತಿಗಳು ಬಾಕಿ ಇರುವ ಬಗ್ಗೆ ವರದಿ ತೋರಿಸುತ್ತಿದೆ. ಈಗಾಗಲೇ ಸದರಿ ವರದಿಗಳನ್ನು ಉಲ್ಲೇಖದ (1)ರ ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ಸಿಬ್ಬಂದಿಗಳ ಖಾಯಂ ಪೂರ್ವ ಅವಧಿ ಮತ್ತು ಕಾಲಮಿತಿ ವೇತನ ಬಡ್ತಿಗಳ ವಿವರಗಳನ್ನು ಹೆಚ್‌ಆರ್‌ಎಂಎಸ್ ನಲ್ಲಿ ಈವರೇವಿಗೂ ದಾಖಲಿಸಿರುವುದಿಲ್ಲ.

ಆದರಿಂದ ಈ ಪತ್ರ ತಲುಪಿದ ಕೂಡಲೇ ಸದರಿ ಮಾಹಿತಿಗಳನ್ನು History ಅಥವಾ Regular entry ನಲ್ಲಿ ದಾಖಲು ಮಾಡಲು ತಿಳಿಸಲಾಗಿದೆ.

ಹಾಗೇಯೇ ಮೇಲಿನ ವರದಿಯಲ್ಲಿನ ಯಾವುದೇ ಸಿಬ್ಬಂದಿಯ ಖಾಯಂ ಪೂರ್ವ ಅವಧಿ ಘೋಷಣೆ ಮತ್ತು ಕಾಲಮಿತಿ ವೇತನ ಬಡ್ತಿಗಳು ಬಾಕಿ ಇದ್ದಲ್ಲಿ ಕೂಡಲೇ ಪ್ರಸ್ತಾವನೆಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ. ಮುಂದುವರೆದು, ಕಾಲಕಾಲಕ್ಕೆ ನಿರ್ದೇಶನಾಲಯದ ಆದೇಶದಂತೆ ಸಿಬ್ಬಂದಿಗಳ ಖಾಯಂ ಪೂರ್ವ ಅವಧಿ ಘೋಷಣೆ, ರಜೆಗಳು, ಅಸಾಧಾರಣ ರಜೆಗಳು, ಇತ್ಯಾದಿಗಳನ್ನು ಹೆಚ್‌ಆರ್‌ಎಂಎಸ್ ನಲ್ಲಿ ದಾಖಲಿಸಬೇಕೆಂದು ತಿಳಿಸಲಾಗಿದೆ. ದಿನಾಂಕ 10-05-2018 ರೊಳಗೆ ಸಿಬ್ಬಂದಿಗಳ ಖಾಯಂ ಪೂರ್ವ ಅವಧಿ ಮತ್ತು ಕಾಲಮಿತಿ ವೇತನ ಬಡ್ತಿಗಳ ವಿವರಗಳನ್ನು ಹೆಚ್‌ಆರ್‌ಎಂಎಸ್ ನಲ್ಲಿ ನಮೂದಿಸಿದ ಬಗ್ಗೆ ವರದಿ ನಿರ್ದೇಶನಾಲಯಕ್ಕೆ ತಲುಪದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಪ್ರಾಂಶುಪಾಲರುಗಳೇ ಜವಾಬ್ದಾರರಾಗುತ್ತರೆ.

ತಮ್ಮ ವಿಶ್ವಾಸಿ

ನಿರ್ದೇಶಕರು
2/5/18

ಇವರಿಗೆ,

1. ಸಹಾಯಕ ಆಡಳಿತಾಧಿಕಾರಿಗಳು, ತಾಶಿನಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.